# ಎಲೆಯಲ್ಲಿ ಕಲೆಯ ಬಲೆ!



ಪ್ರಕೃತಿಯ ರಮ್ಯತೆ ಎಂಥವರನ್ನೂ ಸೆಳೆಯುತ್ತದೆ. ಏಕೆಂದರೆ ಅಲ್ಲಿನ ಪ್ರತಿಯೊಂದು ವಸ್ತುವೂ ಅಮೂಲ್ಯ. ತನ್ನನ್ನು ನಂಬಿದವರನ್ನು ಎಂದಿಗೂ ಕೈಬಿಡುವುದಿಲ್ಲ. ಬದುಕಿನಲ್ಲಿ ಎಲ್ಲವನ್ನೂ ಕಳೆದು ಕೊಂಡವರಿಗೆ ಪ್ರಕೃತಿಯೇ ಆಸರೆ ನೀಡುತ್ತದೆ. ಜೊತೆಗೆ ಬದುಕಲು ದಾರಿ ತೋರಿಸುತ್ತದೆ ಎನ್ನುವುದಕ್ಕೆ 43 ವರ್ಷದ ಲೊರೆಂಜೊ ಸಿಲ್ವಾ ಅವರ ಜೀವನವೇ ಸಾಕ್ಷಿ.

ಪ್ರಕೃತಿಯ ಮಡಿಲು ಜೀವನದ ಕಡಲು: ಸ್ಪೈನ್‌ನವರಾದ ಲೊರೆಂಜೊ ಡ್ಯುರಾನ್ ಸಿಲ್ವಾ ತಮ್ಮ ದುಡಿಮೆಯ ಎಲ್ಲಾ ಮಾರ್ಗಗಳು ಮುಚ್ಚಿದ ನಂತರ ಪ್ರಕೃತಿಯ ಮಡಿಲು ಸೇರಿದರು. ಜೀವನ ಸಾಕಾಗಿ ಸಾವಿನ ನಿರ್ಧಾರ ಮಾಡುತ್ತಾ ಕುಳಿತವರಿಗೆ ಬದುಕಲು ಪ್ರೇರಣೆಯಾದದ್ದು ಒಂದು ಕಂಬಳಿಹುಳು ಎಂದರೆ ಆಶ್ಚರ್ಯವಾಗುತ್ತದೆ ಅಲ್ಲವೇ? ಆದರೂ ಇದು ಸತ್ಯ.

ಅಂದು ಸಾಯುವ ಮಾರ್ಗದ ಬಗ್ಗೆ ಯೋಚನೆ ಮಾಡುತ್ತಾ ಮರದ ಕೆಳಗೆ ಕುಳಿತ ಸಿಲ್ವಾ ಅವರಿಗೆ ಗಿಡದ ಎಲೆಯಲ್ಲಿನ ಕಂಬಳಿಹುಳು ಜೀವನಕ್ಕೆ ದಾರಿ ತೋರಿಸಿತ್ತು. ಕಂಬಳಿಹುಳು ತನ್ನ ಚೂಪಾದ ಹಲ್ಲುಗಳಿಂದ ಎಲೆಗಳನ್ನು ಕತ್ತರಿಸಿ ಆಹಾರ ಸೇವಿಸುತ್ತದೆ. ಹೀಗೆ ಕತ್ತರಿಸಿ ಉಳಿದ ಎಲೆಯ ಭಾಗದಲ್ಲಿ ಚಿತ್ರವಿಚಿತ್ರ ಚಿತ್ತಾರಗಳು ಮೂಡಿರುತ್ತವೆ. ಇದೇ ಐಡಿಯಾ ಸಿಲ್ವಾ ಅವರ ಮುಂದಿನ ಬಾಳಿಗೆ ಬೆಳಕಾದುದು ರೋಚಕ. ಕಂಬಳಿ ಹುಳುವಿನಿಂದ ಪ್ರೇರಿತರಾದ ಸಿಲ್ವಾ ಎಲೆಗಳನ್ನು ಕತ್ತರಿಸಿ ಸಂಗ್ರಹ ಯೋಗ್ಯ ಆಕರ್ಷಕ ಕಲಾಕೃತಿಗಳನ್ನು ಮಾಡಲು ಉತ್ಸುಕರಾದವರು.





ಎಲೆಗೆ ಕಲೆಯ ಮೆರುಗು ನೀಡುವ ಹಾದಿ ಸುಗಮವಲ್ಲದಿದ್ದರೂ ಪ್ರಯತ್ನ ಪ್ರಮಾದ ಕಲಿಕೆಯಿಂದ ಅದನ್ನು ಸಿದ್ದಿಸಿಕೊಂಡರು. ವಿವಿಧ ಆಕಾರ, ಗಾತ್ರಗಳ ಎಲೆಗಳನ್ನು ಸಂಗ್ರಹಿಸಿ, ಸಂಸ್ಕರಿಸಿ, ಒಣಗಿಸಿದ ನಂತರ ಅವುಗಳ ಮೇಲೆ ಪೆನ್ಸಿಲ್ನಿಂದ ಚಿತ್ರ ಬಿಡಿಸಿಕೊಂಡು ಸೂಜಿ, ಚಾಕು ಅಥವಾ ಕತ್ತರಿಗಳಿಂದ ಎಲೆಯನ್ನು ಸುಂದರ ಕಲಾಕೃತಿಯಾಗಿ ಮಾಡುತ್ತಾರೆ. ಹಾಗೆಯೇ ಅವುಗಳಿಗೆ ಸುಂದರ ಫ್ರೇಮ್ ಜೋಡಿಸಿ ಮಾರಾಟ ಮಾಡಿ ಜೀವನ ಸಾಗಿಸುತ್ತಿದ್ದಾರೆ.

ಪ್ರಕೃತಿಯ ಮಡಿಲು ಇವರ ಜೀವನಕ್ಕೆ ಆಧಾರ ವಾದ್ದರಿಂದ ಇವರ ಬಹತೇಕ ಎಲೆಯ ಕಲೆಯಲ್ಲಿ ಪರಿಸರ ಕಾಳಜಿ ಅಡಗಿದೆ. ಜೀವವೈವಿಧ್ಯತೆಯನ್ನು ಸಾರುವ ಅನೇಕ ಕಲಾಕೃತಿಗಳು ಜೀವತಳೆದಿವೆ. ಈಗಾಗಲೇ ಸಾವಿರಾರು ಎಲೆಗಳು ತಮ್ಮ ಮೇಲೆ ವಿವಿಧ ಚಿತ್ರಗಳನ್ನು ಮೂಡಿಸಿಕೊಂಡು ಅತ್ಯುತ್ತಮ ಕಲಾಕೃತಿ ಗಳಾಗಿ ಗೃಹಾಲಂಕಾರ ವಸ್ತುಗಳಾಗಿ ಶೋಭಿಸುತ್ತಿವೆ.



■ ಆರ್.ಬಿ. ಗುರುಬಸವರಾಜ